ಜೆಎಸ್‌ಎಸ್ ಮಹಾವಿದ್ಯಾಪೀಠ
# ಜೆಎಸ್‌ಎಸ್ ಮಹಿಳಾ ಕಾಲೇಜು
ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ
**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 jsscwk@gmail.com www. jsscwkgl.org

## ವ್ಯಸನ ಮುಕ್ತ ಜಾಗೃತಿ ಜಾಥಾ

ಕೊಳ್ಳೇಗಾಲ: 1.8.2025ರಂದು ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲದಲ್ಲಿ ಯುವ ರೆಡ್ ಕ್ರಾಸ್ ಘಟಕ ಹಾಗೂ ತಾಲ್ಲೂಕು ಕಛೇರಿ ಸಹಯೋಗದೊಂದಿಗೆ ಡಾ ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯ ಪ್ರಯುಕ್ತ ಮದ್ಯ & ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ವ್ಯಸನಮುಕ್ತ ದಿನ ಆಚರಣೆಯ ಪ್ರಯುಕ್ತ **"ವ್ಯಸನಮುಕ್ತ ಜಾಗೃತಿ ಜಾಥಾ"** ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು

ಪ್ರಾಂಶುಪಾಲರಾದ ಡಾ ಹೆಚ್.ಎಸ್. ಕೊಂಗಳಪ್ಪ ರವರು ವ್ಯಸನಮುಕ್ತ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮವನ್ನು ಕುರಿತು ಜನರಲ್ಲಿ ಹೇಗೆ ಅರಿವು ಮೂಡಿಸುವುದು ಎಂಬುದರ ಬಗ್ಗೆ ತಿಳಿಸಿದರು.

ತಾಲ್ಲೂಕಿನ ತಹಶೀಲ್ದಾರರಾದ ಶ್ರೀ.ಐ.ಈ.ಬಸವರಾಜುರವರು ಡಾ ಮಹಾಂತ ಶಿವಯೋಗಿಗಳ ಹಿನ್ನೆಲೆ ಹಾಗೂ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಅವರು ಶ್ರಮಿಸಿದ ಪರಿಯನ್ನು ಕುರಿತು ಮಾತನಾಡಿದರು. ಆಧುನಿಕ ಜನಗತ್ತಿನಲ್ಲಿ ಯುವಜನತೆ ವ್ಯಸನಕ್ಕೆ ಬಲಿಯಾಗುತ್ತಿರುವುದರಿಂದ ಎಲ್ಲಾ ಜನರಲ್ಲಿಯೂ ಅರಿವು ಮೂಡಿಸಿ ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕರಿಸಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಅಲ್ಲದೆ ವ್ಯಸನಮುಕ್ತ ದಿನಾಚರಣೆಯ ಪ್ರಯುಕ್ತ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿಯನ್ನು ಶ್ರೀ ಐ.ಈ.ಬಸವರಾಜು ರವರು ಬೋಧಿಸಿದರು.

“ವ್ಯಸನಮುಕ್ತ ಜಾಗೃತಿ ಜಾಥಾ” ಕಾರ್ಯಕ್ರಮ. ಚಿತ್ರದಲ್ಲಿ ಪ್ರಾಚಾರ್ಯರಾದ ಡಾ ಹೆಚ್.ಎಸ್.ಕೊಂಗಳಪ್ಪ, ಶ್ರೀ ಹೆಚ್.ಬಸವರಾಜು, ತಾಲ್ಲೂಕು ದಂಡಾಧಿಕಾರಿ, ಕೊಳ್ಳೇಗಾಲ, ಶ್ರೀ ಶ್ರೀಧರ್, ಸಬ್‌ಇನ್ಸ್‌ಪೆಕ್ಟರ್, ಅಬಕಾರಿ ಇಲಾಖೆ, ಕೊಳ್ಳೇಗಾಲ, ಯೂತ್‌ರೆಡ್ ಕ್ರಾಸ್‌ನ ಸಂಚಾಲಕರಾದ ಶ್ರೀಮತಿ ಪುಟ್ಟಮ್ಮ ಹಾಗೂ ಅಧ್ಯಾಪಕರನ್ನು ಕಾಣಬಹುದು.



“ವ್ಯಸನ ಮುಕ್ತದಿನ ” ಬಗ್ಗೆ ಪ್ರತಿಜ್ಞಾವಿಧಿಯನ್ನು ಹೆಚ್.ಬಸವರಾಜು ರವರು ಬೋಧಿಸುತ್ತಿರುವುದು.



“ವ್ಯಸನಮುಕ್ತ ಜಾಗೃತಿ ಜಾಥಾ” ಹೊರಡುತ್ತಿರುವ ವಿದ್ಯಾರ್ಥಿನಿಯರು

